**International Journal of Research in Social Sciences**
Vol. 7 Issue 11, November 2017,
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail. Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

# INE MANE IS THE RICH CULTURE OF COORG

# ಕೊಡಗಿನ ಶ್ರೀಮಂತ ಸಂಸ್ಕೃತಿಯಲ್ಲಿ ಐನ್‌ಮನೆ

Dr. D.K Saraswathi
Associate Professor of Kannada
Government First Grade Women's College
Madikeri

ಕೊಡಗು ಹಚ್ಚಹಸಿರಿನ ಸಸ್ಯರಾಶಿಗಳಿಂದಲೂ, ಬೆಟ್ಟಗುಡ್ಡಗಳಿಂದಲೂ ಪ್ರಾಣಿಸಂಪನ್ಮೂಲಗಳಿಂದಲೂ, ಜಲಸಂಪನ್ಮೂಲಗಳಿಂದಲೂ ಕೂಡಿರುವ ಸುಂದರಜಿಲ್ಲೆ. ವಿಸ್ತಾರವಾದ ಭಾರತದೇಶದಲ್ಲಿ ಕೊಡಗಿನ ಭೌಗೋಳಿಕ ಸ್ಥಾನ ಕಿರಿದಾದರೂ ಮನಮೋಹಕ ಪ್ರಾಕೃತಿಕಸೌಂದರ್ಯದಿಂದಲೂ, ವಿಶಿಷ್ಟ ಮತ್ತು ಶ್ರೀಮಂತ ಸಾಂಸ್ಕೃತಿಕ ಅನನ್ಯತೆಯ ಜೀವನಕ್ರಮ ಹೊಂದಿದೆ. ಕೊಡಗಿನ ಜನ ಸಮುದಾಯದಿಂದಲೂ, ವಿಶಿಷ್ಟ ಮತ್ತು ಶ್ರೀಮಂತ ಸಾಂಸ್ಕೃತಿಕ ಅನನ್ಯತೆಯ ಜೀವನಕ್ರಮ ಹೊಂದಿದ ಕೊಡಗಿನ ಜನಸಮುದಾಯದಿಂದಲೂ ದೇಶವಿದೇಶಗಳಲ್ಲಿ ಜನಪ್ರಿಯತೆಯನ್ನು ಪಡೆದುಕೊಂಡಿದೆ. ಭಾರತದ ಪ್ರಸಿದ್ಧವಾದ ಪುಣ್ಯನದಿಗಳಲ್ಲಿ ಒಂದಾದ ಕಾವೇರಿ ನದಿಯ ಉಗಮಸ್ಥಾನ. ಕಾಫಿ, ಏಲಕ್ಕಿ, ಭತ್ತ, ಕಿತ್ತಳೆಗಳಿಂದ ಹೆಸರು ವಾಸಿಯಾದ ನಾಡು ಕೊಡಗು.

ಕೊಡಗಿನಲ್ಲಿ ವಿಭಿನ್ನ ಭಾಷೆಗಳನ್ನು ಆಡುವ ಜನರು ಇರುವಂತೆಯೇ ವಿಭಿನ್ನ ಜಾತಿ, ಧರ್ಮಪಂಗಡಗಳಿಗೆ ಸೇರಿದ ಜನರು ಕಾಣಿಸುತ್ತಾರೆ. ಕೃಷಿಕರಾದ ಕೊಡವರು, ಗೌಡರು ವ್ಯಾಪಾರವನ್ನೇ ಪ್ರಧಾನವಾಗಿಸಿಕೊಂಡ ಮುಸಲ್ಮಾನರು, ಮಲೆಯಾಳಿಗಳು ಪೂಜಾಕಾರ್ಯವನ್ನು ಮಾಡುವ ಬ್ರಾಹ್ಮಣರು, ಇನ್ನು ಬೇರೆಬೇರೆ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವ ಅಮ್ಮಕೊಡವರು, ಹೆಗ್ಗಡೆಗಳು, ಐರಿಗಳು, ಅಡಿಯರು, ಕುಡಿಯರು, ಕೊಯವರು, ಮಲಿಯರು, ಬಣ್ಣರು, ಎರವರು, ಮೇದರು, ಹಜಾಮರು, ಗೊಲ್ಲರು, ಕೆಂಬಟ್ಟಿಗಳು, ಗಾಣಿಗರು, ಗೊಲ್ಲರು, ಪಣಿಕರು, ಕಣಿಯರು ಮತ್ತು ಕ್ರಿಶ್ಚಿಯನ್ನರು ಇದ್ದಾರೆ. ಭಾಷೆ-ಸಂಸ್ಕೃತಿ, ಆಚಾರ-ವಿಚಾರ, ಉಡುಗೆ-ತೊಡುಗೆ ಸಂಪ್ರದಾಯಗಳಲ್ಲಿ ಇತರ ಜಿಲ್ಲೆಗಳಿಗಿಂತ ಭಿನ್ನವಾಗಿ ನಿಲ್ಲುವ ಕೊಡಗು ಸರ್ವಜನಾಂಗದ ಶಾಂತಿಯ ತೋಟವಾಗಿದೆ.

ಕೊಡಗಿನ ಸಾಂಸ್ಕೃತಿಕ ಪರಿಸರದಲ್ಲಿ ಕೊಡಗಿನ ಮೂಲನಿವಾಸಿಗಳು ಹಾಗೂ ಬೇರೆಕಡೆಯಿಂದ ವಲಸೆ ಬಂದು ನಿಂತ ಇತರ ಸಮುದಾಯದವರು ಮುಖ್ಯರಾಗುತ್ತಾರೆ. ಹೊರನಾಡುಗಳಿಂದ ಬಂದು ಇಲ್ಲಿ ನೆಲೆ ನಿಂತ ಮೇಲೆ ಇಲ್ಲಿನ ಮಣ್ಣಿಗೆ ಒಗ್ಗಿಕೊಂಡು ಕೆಲವು ಆಚಾರ ವಿಚಾರಗಳಲ್ಲಿ ಕೆಲವನ್ನು ಉಳಿಸಿಕೊಂಡು ಕೆಲವನ್ನು ಪ್ರಾದೇಶಿಕವಾಗಿ ಅಳವಡಿಸಿಕೊಂಡು ಬರುವ ಸಾಂಸ್ಕೃತಿಕ ಕೊಳುಕೊಡೆಗಳ ಎಲ್ಲಾ ಕಾಲದಲ್ಲಿಯೂ ಎಲ್ಲಾ ಕಡೆಗಳಲ್ಲಿಯು ನಡೆಯುವ ಸಂಗತಿಗಳಾಗಿವೆ ಇದಕ್ಕೆ ಕೊಡಗು ಹೊರತಲ್ಲ.

ಒಂದೇ ಅಡುಗೆಮನೆಯನ್ನು ಹೊಂದಿರುವ ಕುಟುಂಬಸ್ಥರು ಕೂಡುಕುಟುಂಬವಾಗಿ ವಾಸಮಾಡುವ ಮನೆಯನ್ನು ಐನ್ಮನೆ ಎನ್ನುತ್ತಾರೆ. ಇದನ್ನ 'ಮೂಲಮನೆ' 'ದೊಡ್ಡಮನೆ' 'ಅಯ್ಯನಮನೆ' ತರುವಾಡು' ಮನೆಎಂಬುದಾಗಿಯೂ ಕರೆಯುತ್ತಾರೆ. ಹಿರಿಯ ಮುತ್ತಜ್ಜ ಕಟ್ಟಿಮುತ್ತಜ್ಜ-ಮುತ್ತಜ್ಜಿ ಅಜ್ಜ-ಅಜ್ಜಿಯರು ಬಾಳಿಬದುಕಿದಮನೆ. ಹಿಂದೆ ಕೂಡಿಬದುಕುತ್ತಿದ್ದ ಅಂದರೆ ಅವಿಭಕ್ತ

ಕುಟುಂಬಪದ್ಧತಿಯಿಂದ ಒಗ್ಗಟ್ಟಿನ ನೆಲೆಯ ಮನೆಗಳಿಗೆ ಅವುಗಳದ್ದೇ ಆದ ಹಿನ್ನೆಲೆ ಪರಂಪರೆಗಳಿವೆ. ಅವರ ಭೌತಿಕ ಬದುಕಿಗೆ ಮುಖ್ಯನೆಲೆಯಾಗಿರುವ ಮನೆಗಳ ರಚನಾ ವಿನ್ಯಾಸಗಳು, ಸಾಮಾನ್ಯ ಮನೆಗಳಿಗಿಂತ ಭಿನ್ನವಾಗಿರುತ್ತವೆ. ಇಂತಹ ಐನ್ಮನೆತನಗಳ ಮನೆಗಳನ್ನು ನಾಲ್ಕು ಸೂತ್ರದ, ನಾಲ್ಕಂಕಣದ ಮನೆಗಳೆಂದು ಗುರುತಿಸುತ್ತಾರೆ. ಎಲ್ಲಾ ಐನ್ಮನೆಗಳು ನಾಲ್ಕುಸೂತ್ರದ, ನಾಲ್ಕಂಕಣದ ಮನೆಗಳೆಂದು ಗುರುತಿಸುತ್ತಾರೆ. ಎಲ್ಲಾ ಐನ್ಮನೆಗಳು ನಾಲ್ಕು ಸೂತ್ರದ ಮನೆಗಳೇ ಅಗಿರುವುದಿಲ್ಲ. ಕೊಡಗಿನ ಸೋಮವಾರಪೇಟೆ ವ್ಯಾಪ್ತಿಯ ಒಕ್ಕಲಿಗಗೌಡ, ನಾಮಧಾರಿಗೌಡ, ರೆಡ್ಡಿ, ವಿಶ್ವಕರ್ಮ ಜನಾಂಗದವರಲ್ಲಿ 'ಐನ್ಮನೆ' ಎಂಬ ಹೆಸರಿನ ಮೂಲಕ ಕರೆಯಲ್ಪಡದಿದ್ದರೂ ಹಿರಿಯರು ಬಾಳಿ ಬದುಕಿದ ಮನೆಯ ವಿಶೇಷ ಗೌರವವನ್ನು ಪಡೆದುಕೊಂಡಿದೆ.

ಕೊಡಗಿನ ಸಂದರ್ಭದಲ್ಲಿ ಕೊಡವರು, ಅರೆಭಾಷಿಕಗೌಡರು, ಕೊಡವ ಮಡಿವಾಳರು, ಕೊಡವನಾಯರ್, ಕೆಂಬಟ್ಟಿ, ಐರಿಗಳು, ಹೆಗ್ಗಡೆಗಳು ಅಮ್ಮಕೊಡವರು, ಮಲೆಯರು, ಜಮ್ಮಾಮಾಪಿಳ್ಳೆಗಳು, ಗೊಲ್ಲರು, ಕುಂಬಾರರು ಮೊದಲಾದವರು ತಮ್ಮದೇ ಆದ ಐನ್ಮನೆಗಳನ್ನು ಹೊಂದಿರುತ್ತಾರೆ. ಕೊಡಗಿನ ಬಹುತೇಕ ಜನಾಂಗದವರಲ್ಲಿ ಮನೆಹೆಸರಿನ ಪದ್ಧತಿ ಇದೆ. ಪ್ರತೀ ಕುಟುಂಬದವರಿಗೂ ತಮ್ಮದೇ ಆದ ಐನ್ಮನೆಗಳಿವೆ.

ಮಾನವ ಸಮಾಜಕ್ಕೆ ಕುಟುಂಬವು ಮೂಲಾಧಾರ. ಎಲ್ಲಾ ಪಂಗಡಗಳು ಎಲ್ಲಾ ವ್ಯಕ್ತಿಗಳೂ ಎಲ್ಲಾ ರೀತಿ ನೀತಿಗಳೂ ಜೀವನದ ಎಲ್ಲಾ ಅವಸ್ಥೆಗಳು ಹುಟ್ಟಿರುವುದು ಕುಟುಂಬದಿಂದಲೇ ಎಂಬುದು ಗಮನಾರ್ಹ ಅಂಶ. ವಿಭಕ್ತ ಕುಟುಂಬ ವ್ಯವಸ್ಥೆಯ ಕಲ್ಪನೆಬಂದ ಬಳಿಕ ಅವಿಭಕ್ತ ಕುಟುಂಬಗಳು ಕವಲುಗಳಾಗಿ ಒಡೆದುವು ಇನ್ನೂರು ಮುನ್ನೂರು ವರ್ಷಗಳ ಇತಿಹಾಸವುಳ್ಳ ಮನೆಗಳಲ್ಲಿ ಸದಸ್ಯರ ಸಂಖ್ಯೆ ಮತ್ತು ಆಸ್ತಿಯ ವಿಸ್ತರಣೆಯೊಂದಿಗೆ ಕೂಡು ಕುಟುಂಬಗಳು ಕವಲಾಗಿದೂರದ ಊರುಗಳಲ್ಲಿ ನೆಲೆನಿಲ್ಲುವುದು ಅನಿವಾರ್ಯವಾಯಿತು. ಆದರೂ ವಾರ್ಷಿಕಾವರ್ತನ ಮತ್ತು ಜೀವನಾವರ್ತನದ ಪ್ರತಿಯೊಂದು ಹಬ್ಬಹರಿದಿನ ಆಚರಣೆ ವಿಧಿವಿಧಾನಗಳಿಗೆ, ದೈವ-ದೇವರ ನಡಾವಳಿಕೆಗಳಿಗೆ ತಮ್ಮ ಕುಟುಂಬದ ಮೂಲ ಸ್ಥಾನಕ್ಕೆ ಕುಟುಂಬದ ಎಲ್ಲಾ ಸದಸ್ಯರ ಬರುತ್ತಾರೆ. ಹೀಗೆ ಊರಲ್ಲಿ ಒಂದೇ ಕುಟುಂಬವಾಗಿದ್ದು, ಬಳಿಕ ಕವಲಾಗಿ ದೂರದೂರುಗಳಲ್ಲಿ ವಾಸಿಸುತ್ತಿದ್ದರೂ ತಮ್ಮ ಬದುಕಿನ ಸಾಂಸ್ಕೃತಿಕ ನೆಲೆಗಳನ್ನು ಕಂಡುಕೊಳ್ಳಲು ತಮ್ಮ ಮೂಲಸ್ಥಾನಕ್ಕೆ ಬರುತ್ತಾರೆ. ಈ ಮೂಲ ಸ್ಥಾನವೇ ಜನಪದವಾಗಿ ಐನ್ಮನೆಯಾಗಿದೆ.

ಐನ್ಮನೆಗಳು ಹಿಂದೆ ಬಹಳ ದೊಡ್ಡದಿದ್ದು, ಮನೆಯ ಸುತ್ತಲೂ ಕೋಟೆಯಂತೆ ಗೋಡೆಗಳಿರುತ್ತಿದ್ದವು ಎತ್ತರವಾದ ಸ್ಥಳದಲ್ಲಿ ಪೂರ್ವಾಭಿಮುಖವಾಗಿ ದೊಡ್ಡ ಬಾಗಿಲಿರುತ್ತದೆ. ಬಾಗಿಲಿನಿಂದ ಹೊರಬದಿಗೆ ಸುಮಾರು ನಲವತ್ತು ಜನ ಕುಳಿತು ಕೊಳ್ಳಬಹುದಾದಷ್ಟು ದೊಡ್ಡ ಜಗಲಿ ಇದ್ದು ಹೊರಾಂಗಣಕ್ಕೆ ಚಾಚಿರುತ್ತದೆ. ಈ ಜಗಲಿಗೆ 'ಕಯ್ಯಾಲೆ' ಎಂದು ಹೆಸರು ಮನೆಗೆ ಬಂದ ಹೊಸಬರು, ನೆಂಟರು ಇಲ್ಲಿ ಕುಳಿತುಕೊಳ್ಳುತ್ತಾರೆ. ಕೈಯಾಲೆಯ ಮೇಲ್ಛಾವಣಿಯನ್ನು ಎತ್ತಿ ಹಿಡಿದಿರುವ ಮುಂದಿನ ಕಂಬಗಳಿಗೆ ಹೊಂದಿಕೊಂಡು ಬೆಂಚಿನಂತಿರುವ ಮರವನ್ನು 'ಐಮರ' ಎಂದು ಕರೆಯುತ್ತಾರೆ. ಇದು ಸ್ವಲ್ಪ ಎತ್ತರದಲ್ಲಿರುತ್ತದೆ. ಹೆಂಗಸರು ಐಮರದಲ್ಲಿ ಕುಳಿತುಕೊಳ್ಳಬಾರದೆಂಬ ನಿಷೇಧ ಇದೆ. ಇಡೀ ಕುಟುಂಬದವರೆಲ್ಲ ಕೈಯಾಲೆಯಲ್ಲಿ ಕುಳಿತಾಗ ಐಮರದಲ್ಲಿ ಕುಳಿತ ಯಜಮಾನ ಕುಟುಂಬದ ಸಮಸ್ಯೆಗಳಿಗೆ ಪರಿಹಾರ ನೀಡುತ್ತಾರೆ. ಕುಟುಂಬದ ಹಿರಿಯನನ್ನು 'ಪಟ್ಟೆದಾರ' ಎಂದು ಕರೆಯುತ್ತಾರೆ.

ಆತ ಈ ಸ್ಥಳದಲ್ಲಿ ಕುಳಿತು ಕುಟುಂಬದವರ ದೂರನ್ನು ಮನಸ್ಸಿಟ್ಟು ಕೇಳಿ ತನ್ನ ತೀರ್ಪು ಕೊಡುತ್ತಿದ್ದನು. ಹಾಗಾಗಿ ಐಮರವು ನ್ಯಾಯಪೀಠವು ಆಗಿದೆ ಮತ್ತು ಅಧಿಕಾರಿ ಪಟ್ಟವೂ ಆಗಿದೆ. ಕೈಯಾಲೆಯು ಅತಿಥಿಗಳ ಸ್ಥಳವು ಆಗಿದೆ. ಕುಟುಂಬದಲ್ಲಿ ನಡೆಯುವ ಎಲ್ಲಾ ಶುಭಕಾರ್ಯಗಳು ಪಟ್ಟೇದಾರನ ವಿಜ್ಞಾಪನೆಯಲ್ಲಿ ನಡೆಯುತ್ತದೆ ಮತ್ತು ಆತನ ಮಾರ್ಗದರ್ಶನದಲ್ಲಿ ನಡೆಯುತ್ತದೆ. ಕೈಯಾಲೆಯಲ್ಲಿ ಸೊಗಸಾದ ಕೆತ್ತನೆಗಳಿಂದ ಕೂಡಿದ ಗೋಧಿ ಕಂಬಗಳಿರುತ್ತವೆ. ಈ ಕಂಬದ ಮೇಲ್ಭಾಗವನ್ನು 'ಬಿಟ್ಟ' ಎಂದು ಕರೆಯುವುರು.

ಕೈಯಾಲೆಯಿಂದ ಹಿರಿಬಾಗಿಲಿನ ಮೂಲಕ ಮನೆಯ ಒಳಹೊಕ್ಕರೆ ಒಳಾಂಗಣಕ್ಕೆ ತಾಗಿದ ಜಗಲಿ ಸಿಗುತ್ತದೆ. ಇದನ್ನು 'ಬಾಡೆ' ಎಂದು ಕರೆಯುತ್ತಾರೆ. ಮನೆಯ ಹೆಂಗಸರು ಒಟ್ಟಿಗೆ ಕುಳಿತು ಮಾತನಾಡುವ ಸ್ಥಳ ಇದು. ಬಾಡೆಗೆ ತಾಗಿರುವ ಗೋಡೆಯಲ್ಲಿ ಪೂರ್ವಾಭಿಮುಖವಾಗಿ ಒಂದು ದೀಪ ಇರುತ್ತದೆ. ಇದನ್ನು 'ನೆಲ್ಲಕ್ಕಿದೀಪ' ಎಂದು ಕರೆಯುತ್ತಾರೆ. ಕುಟುಂಬ ಧಾರ್ಮಿಕ ಕ್ರಿಯೆಗಳು ಶುಭಕಾರ್ಯಗಳು ಮತ್ತು ಸಾಂದರ್ಭಿಕ ವಿಶೇಷ ಕಾರ್ಯಗಳು ಇಲ್ಲಿ ನಡೆಯುತ್ತವೆ. ಬಾಡೆಯಲ್ಲಿ ಊಟದ ವ್ಯವಸ್ಥೆ ನಡೆಯುತ್ತದೆ. ಕುಟುಂಬದಲ್ಲಿ ಬಾಳಿ ಬದುಕಿ ಗತಿಸಿದ ಹಿರಿಯರನ್ನು 'ಕಾರಣ' ರೆಂದು ಕರೆಯುತ್ತಾರೆ ಮತ್ತು ವಿಶೇಷ ದಿನಗಳಲ್ಲಿ ಅವರಿಗೆ ಎಡೆ ಹಾಕುತ್ತಾರೆ. ಬಾಡೆಯಲ್ಲಿರುವ ನೆಲ್ಲಕ್ಕಿ ಮತ್ತು ಕಯ್ಯಾಲೆಯಲ್ಲಿರುವ ದೀಪಕ್ಕೆ ಕುಟುಂಬದ ಪ್ರತಿ ಭಾಗದವರು ತಮ್ಮ ಸರದಿಯಂತೆ ಬೆಳಗ್ಗೆ ಮತ್ತು ಸಂಜೆ ದೀಪ ಹಚ್ಚುತ್ತಾರೆ.

ಬಾಡೆಯ ಹೊರಬದಿಗೆ, ಅಂದರೆ ಹೊರಾಂಗಣಕ್ಕೆ ಚಾಚಿದಂತೆ ನಾಲ್ಕು ಸುತ್ತಿನಲ್ಲೂ ಸಣ್ಣಸಣ್ಣ ಕೋಣೆಗಳಿರುತ್ತವೆ. ಅವುಗಳನ್ನು ಕೋಂಬರೆಗಳೆಂದು ಕರೆಯುತ್ತಾರೆ. ಸಣ್ಣ ಕಿಂಡಿಯಿಂದ ಸ್ವಲ್ಪ ಬೆಳಕು ಕೋಂಬರೆಗೆ ಬರುತ್ತಿರುತ್ತದೆ. ಈ ಕೋಂಬರೆಗಳಲ್ಲಿ ಕುಟುಂಬದ ಸದಸ್ಯರು ವಾಸಿಸುತ್ತಾರೆ. ಗಂಡಹೆಂಡತಿ ಮಕ್ಕಳು ಒಂದು ಕೋಂಬರೆಗಳಲ್ಲಿ ಇರುತ್ತಾರೆ. ಐನ್ಮನೆಯಲ್ಲಿರುವ ಅಡುಗೆ ಮನೆಯು ಕುಟುಂಬದ ಎಲ್ಲಾ ಸದಸ್ಯರಿಗೂ ಹಕ್ಕಾಗಿರುವ ಕೋಣೆ. ಇದಕ್ಕೆ "ಉಂಬೊಳಗೆ" ಎಂದು ಕರೆಯುತ್ತಾರೆ. (ಉಂಬ–ಊಟಮಾಡುವ) (ಒಳಗೆ–ಕೋಣೆ) ಐನ್ಮನೆಯ ಮಾಳಿಗೆಯಲ್ಲಿ ಭತ್ತದ ಕಡಿಕೆಯನ್ನು ಕಟ್ಟಿರುತ್ತಾರೆ. ಬೆಳಕಿಲ್ಲದ ಈ ಮಾಳಿಗೆಗಳಲ್ಲಿ ಸದಾ ಹೊಗೆ ತುಂಬಿರುತ್ತದೆ. ಹಾಗೆಯೇ ಅಡುಗೆ ಮನೆಗಳಲ್ಲೂ ಬೆಳಕಿನ ಸಣ್ಣಕಿಂಡಿಗಳಿದ್ದು ಸದಾ ಕತ್ತಲಿನಿಂದಲೂ ಹೊಗೆಯಿಂದಲೂ ತುಂಬಿರುತ್ತದೆ. ಕುಟುಂಬದ ಪಟ್ಟೇದಾರನಿಗೆ ಪ್ರತ್ಯೇಕವಾದ ಕೊಂಬರೆ ಇರುತ್ತದೆ. ತಾವು ಆರಾದಿಸುವ ದೈವದೇವತೆಗಳಿಗೆ ಸಂಬಂಧಿಸಿದ ಪರಿಕರಗಳು ಐನ್ಮನೆಯ ಕೋಂಬರೆಗಳಲ್ಲಿ ಇರುತ್ತದೆ. ಕೊಡಗಿನ ಸಾಂಸ್ಕೃತಿಕ ಬದುಕಿನಲ್ಲಿ ಐನ್ಮನೆಗಳು ಪ್ರಮುಖಪಾತ್ರ ವಹಿಸುತ್ತವೆ. ಇಲ್ಲಿ ನೆಲೆಸಿರುವ ವಿವಿಧ ಸಮುದಾಯಗಳ ಸಾಂಸ್ಕೃತಿಕ ಶ್ರೀಮಂತಿಕೆಯ ಸಂಕೇತವಾಗಿ ಐನ್ಮನೆಗಳು ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ. ವ್ಯಕ್ತಿಯೊಬ್ಬ ಹುಟ್ಟಿನಿಂದ ತೊಡಗಿ ಬದುಕಿನ ಕೊನೆಯವರೆಗೂ ಒಂದಲ್ಲ ಒಂದು ರೀತಿಯಲ್ಲಿ ಐನ್ಮನೆಯ ನಂಟನ್ನು ಹೊಂದಿರುತ್ತಾನೆ.

ಐನ್ಮನೆಗಳಿರುವ ಕೊಡಗಿನ ಜನ ಸಮುದಾಯದವರು ತಮ್ಮ ವಾರ್ಷಿಕಾವರ್ತನ ಮತ್ತು ಜೀವನಾವರ್ತನದ ಕಾರ್ಯಗಳಲ್ಲಿ ಐನ್ಮನೆಗಳಲ್ಲಿ ಜೊತೆ ಸೇರುತ್ತಾರೆ. ಆಧುನೀಕತೆ ಕೊಡಗಿನ ಜನರವಸತಿ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಯನ್ನು ತಂದಿದೆ. ಜನರು ವಿದ್ಯಾವಂತರಾಗಿ ಆರ್ಥಿಕವಾಗಿ ಸದೃಢರಾಗುವಂತೆ ಆಧುನಿಕವಾಗಿ ಮನೆಗಳನ್ನು ತಮಗೆ ಅನುಕೂಲವಾಗುವಂತೆ ಕೋಣೆಗಳನ್ನು ಇತರ ಸೌಕರ್ಯಗಳನ್ನು ಮಾಡಿಕೊಳ್ಳುತ್ತಾರೆ. ಆದರೆ ಐನ್ಮನೆಗಳನ್ನು ದೇವಾಲಯದಂತೆ ಕಾಪಾಡಿಕೊಂಡು ಬಂದಿದ್ದಾರೆ.

**International Journal of Research in Social Sciences**
Vol. 7 Issue 11, November 2017,
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail.com Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

ಜೀವನಾವರ್ತನದ ಹುಟ್ಟಿನಿಂದ ಸಾವಿನವರೆಗಿನ ಆಚರಣೆಗಳು ಹಿಂದೆ ಇಲ್ಲಿಯೇ ನಡೆಯುತ್ತಿತ್ತು. ಹುಟ್ಟು, ಮೈನೆರೆಯುವಿಕೆ ಸಾವಿನ ಸಂದರ್ಭದಲ್ಲಿ ಸೂತಕವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ ಬರುತ್ತಾರೆ. ಬಾಣಂತಿಗೆ ಋತುಮತಿಯಾದವಳಿಗೆ ಐನ್ಮನೆಯಲ್ಲಿ ಪ್ರತ್ಯೇಕವಾದ ಕೋಣೆಗಳಿರುತಿತ್ತು. ಮಗುವಿನ ನಾಮಕರಣ, ವೀಳ್ಯಶಾಸ್ತ್ರ, ಮದುವೆ, ಋತು ಶಾಂತಿ ಮುಂತಾದ ಶುಭಕಾರ್ಯಗಳನ್ನು ಇಲ್ಲಿಯೇ ನಿರ್ವಹಿಸುತ್ತಿದ್ದರು. ಸತ್ತ ನಂತರದ ಕಾರ್ಯಗಳು ಇಲ್ಲಿಯೇ ನಡೆಯುತ್ತಿದ್ದವು.

ದೂರದೂರಿನಲ್ಲಿ ನೆಲೆ ನಿಂತವರು ತಮ್ಮೆಲ್ಲ ಕಾರ್ಯಗಳನ್ನು ಗುರುಕಾರೋಣದ ಎಡೆಹಾಕುವ ಪದ್ಧತಿ ಇಂದಿಗೂ ಇದೆ. ಇನ್ನು ವಾರ್ಷಿಕಾವರ್ತನದ ಪ್ರಮುಖ ಹಬ್ಬಗಳಾದ ಕೈಲುಮೂಹೂರ್ತ, ಕಾವೇ ಸಂಕ್ರಮಣ ಮತ್ತು ಹುತ್ತರಿಹಬ್ಬಗಳನ್ನು ಇಲ್ಲಿಯೇ ಆಚರಿಸಲಾಗುತ್ತದೆ. ಇನ್ನು ವಾರ್ಷಿಕವಾಗಿ ದೈವದೇವರಿಗೆ ಕುಟುಂಬಸ್ಥರೆಲ್ಲ ಸೇರಿ ಎಡೆಹಾಕುವ ಕ್ರಮವು ನಡೆಯುತ್ತದೆ. ಅಲ್ಲದೆ ಹರಿಸೇವೆ, ದೈವಗಳಕೋಲವು ಕೂಡ ಕುಟುಂಬಸ್ಥರು ಸೇರಿ ನಡೆಸುತ್ತಾರೆ.

ಹೀಗೆ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಭೌಗಳಿಕವಾಗಿ ಐನ್ಮನೆಗಳು ಒಂದಲ್ಲ ಒಂದು ರೀತಿಯಲ್ಲಿ ಕೊಡಗಿನವರ ಜೀವನಕ್ರಮದೊಂದಿಗೆ ಸಂಬಂಧವನ್ನು ಬೆಸೆದುಕೊಂಡಿದೆ. ಸಾಂಸ್ಕೃತಿಕವಾಗಿ ಜೊತೆಸೇರಲು, ಕೃಷಿ – ಕೃಷಿಯೇತರ ಚಟುವಟಿಕೆಗಳಲ್ಲಿ ಕುಟುಂಬದವರು ಸಹಕಾರವನ್ನು ಪಡೆದುಕೊಳ್ಳಲು ಸಹಕಾರಿ. ಈ ಐನ್ಮನೆಗಳು ಕೊಡಗಿನ ಜನರ ಕೃಷಿ ಬದುಕಿಗೆ ಪೂರಕವಾಗಿದ್ದು ಮನೆತನವನ್ನು ಎತ್ತಿ ನಿಲ್ಲಿಸಿದ ಐತಿಹಾಸಿಕ ವ್ಯಕ್ತಿಯ ನೆನಪನ್ನು ಸ್ಥಿರವಾಗಿಸುತ್ತವೆ. ಸಾಂಸ್ಕೃತಿಕ ನಡಾವಳಿಯನ್ನು ಅಚ್ಚುಕಟ್ಟಾಗಿ ನೇರ್ಪುಗೊಳಿಸುತ್ತದೆ. ಸಾಂಸ್ಕೃತಿಕ ಬಾಂಧವ್ಯವನ್ನು ಬೆಸೆಯುವುದರೊಂದಿಗೆ ವಂಶದ ಇತಿಹಾಸವನ್ನು ಉಳಿಸಿ ವರ್ತಮಾನದ ಜಾಯಮಾನಕ್ಕೂ ಸ್ಪಂದಿಸುವಂತೆ ಮಾಡುತ್ತವೆ. ಕೊಡಗಿನ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಬೆಸೆಯುತ್ತವೆ.

ಮನೆಯೆಂಬುದು ಸಾಮಾನ್ಯ ಕಟ್ಟಡಗಳಿಗಿಂತ ಭಿನ್ನವಾದುದು ಅದು ವಾಸಿಸಲು ಇರುವ ಜಾಗ ಮಾತ್ರವಲ್ಲ, ಅದು ಒಟ್ಟು ಬದುಕಿಗೆ ಅರ್ಥ ನೀಡುವ ನೆಲೆ. ಮನೆವಾಸಿಸುವವರ ಮನೋಧರ್ಮವನ್ನು ಅಭಿವ್ಯಕ್ತಪಡಿಸುವಂತಿರುತ್ತದೆ. ಕುಟುಂಬದ ಒಟ್ಟು ಸಾಂಸ್ಕೃತಿಕ ಸಂಕೀರ್ಣತೆಯನ್ನು ಹೊಂದಿ ಅದರ ನಿರ್ಮಾಣದ ಹಿಂದಿರುವ ಅಲೋಚನಾ ವಿಧಾನವನ್ನು ವ್ಯಕ್ತಪಡಿಸುತ್ತದೆ. ಸಾಮಾಜಿಕವಾಗಿ ರಾಜಕೀಯವಾಗಿ ಆಡಳಿತಾತ್ಮಕವಾಗಿ ಆರ್ಥಿಕವಾಗಿ, ಧಾರ್ಮಿಕವಾಗಿ ಪಡೆದುಕೊಂಡಿರುವ ಸ್ಥಾನಮಾನದ ನೆಲೆಗಟ್ಟುಗಳನ್ನು ಪ್ರತಿನಿಧಿಸುವಂತಿರುತ್ತದೆ.

ಮನುಷ್ಯರು ವಾಸಿಸುವ ಕಟ್ಟಡವನ್ನು ಮಾತ್ರ ಮನೆಯೆನ್ನಲಾಗದು. ಅವರ ಬದುಕಿಗೆ ಅನಿವಾರ್ಯ ಅಗತ್ಯಗಳಾಗಿರುವ ಕೊಟ್ಟಿಗೆ, ಹಟ್ಟಿಗಳು ಕೂಡಿದ ಆವರಣ ಮನೆಯೆಂದು ಕರೆಯಿಸಿಕೊಳ್ಳುತ್ತದೆ. ಐನ್ಮನೆಗಳು ಇದಕ್ಕೆ ಪೂರಕವಾಗಿರುತ್ತದೆ. ಐನ್ಮನೆಗಳನ್ನು ಗತಕಾಲದ ಸಾಂಸ್ಕೃತಿಕ ಸಾಕ್ಷಿಯಾಗಿ ನೋಡುವುದಕ್ಕಿಂತ ಸರ್ವಕಾಲೀನ ಭೌತಿಕ-ಸಾಕ್ಷಿಯಾಗಿ ಗಮನಿಸುವುದು ಸೂಕ್ತ. ಇವು ಕೇವಲ ಕಟ್ಟಡಗಳಲ್ಲ ಬದಲಿಗೆ ಜನ ಬದುಕಿನ ಮೇಲೆ ಪರಿಣಾಮ ಬೀರುವಂಥ ಜೀವಂತಿಕೆಯ ನಿಧಿ. ಐನ್ಮನೆಗಳು ಇತಿಹಾಸದ ಮನುಷ್ಯ ಸಂಬಂಧಗಳ ಒಗ್ಗಟ್ಟಿನ ಅಚ್ಚುಗಟ್ಟುತನವನ್ನು ಧ್ವನಿಸುತ್ತದೆ. ಅಲ್ಲದೆ ಸಾಂಘಿಕ ಜೀವನ ಮನುಷ್ಯನಿಗೆ ಭದ್ರತೆಯನ್ನುಒದಗಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಐನ್ಮನೆಗಳ ಪ್ರಸ್ತುತ ಸ್ಥಿತಿಗತಿಗಳನ್ನು ಅವಲೋಕಿಸುವುದಾದರೆ ಇಂದು ಇವು ಆರಾಧನಾ ಕೇಂದ್ರಗಳಾಗಿ

**International Journal of Research in Social Sciences**
Vol. 7 Issue 11, November 2017,
ISSN: 2249-2496 Impact Factor: 7.081
Journal Homepage: http://www.ijmra.us, Email: editorijmie@gmail.com Double-Blind Peer Reviewed Refereed Open Access International Journal - Included in the International Serial Directories Indexed & Listed at: Ulrich's Periodicals Directory ©, U.S.A., Open J-Gate as well as in Cabell's Directories of Publishing Opportunities, U.S.A

ಪ್ರತಿಕುಟುಂಬದಲ್ಲಿ ಉಳಿದುಕೊಂಡಿದೆ ಆಸ್ತಿಯ ಹಂಚಿಕೆಯ ಕಾರಣ ಮತ್ತು ಸಂಸಾರಗಳ ಸಂಖ್ಯೆ ಹೆಚ್ಚಿದಂತೆ ವಿಭಕ್ತ ಕುಟುಂಬಗಳು ತಮ್ಮದೇ ಸ್ವಂತ ಮನೆಯನ್ನು ನಿರ್ಮಿಸಿಕೊಂಡು ವಾಸಿಸುತ್ತಾರೆ. ಶಿಕ್ಷಣ ವಿಜ್ಞಾನ ಆಧುನೀಕತೆ ಇವು ಜನಜೀವನದ ಮೇಲೆ ಹೇರಳ ಪ್ರಭಾವ ಬೀರಿದೆ. ಕೆಲವೆಡೆ ಐನ್ಮನೆಗಳು ಶಿಥಿಲಗೊಂಡು ನಿರ್ವಹಣೆ ಸಾಧ್ಯವಾಗದೆ ಗುಡಿರೂಪದ ಸಣ್ಣಕಟ್ಟಡಗಳನ್ನು ಕಟ್ಟಿಕೊಂಡು ವಿಶೇಷ ದಿನಗಳಲ್ಲಿ ಕಟುಂಬಸ್ಥರು ಒಂದುಗೂಡುತ್ತಾರೆ.

ನಗರ ಸಂಸ್ಕೃತಿಗೆ ಮಾರುಹೋದ ಕೊಡಗಿನ ಜನತೆ ಇಂದು ಸಂಸ್ಕೃತಿ ಪರಂಪರೆಗಳ ಬಗ್ಗೆ ಆಸಕ್ತಿ ಕಳೆದುಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಮತ್ತೆ ಐನ್ಮನೆಗಳು ದೇವಮನೆಗಳಾಗಿ ಗುರು ಕಾರಣರ ಹರಕೆ ಹಾರೈಕೆಗಳು ಕಿರಿಯರನ್ನು ರಕ್ಷಿಸುತ್ತದೆ ಎಂಬ ಅರಿವು ಮೂಡುತ್ತಿರುವುದು ಮಹತ್ವದ ವಿಚಾರವಾಗಿದೆ. ಐನ್ಮನೆಗಳು ಸಾಮರಸ್ಯದ ಬದುಕನ್ನು ರೂಪಿಸುವ, ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಸಾರುವ ಆ ಮೂಲಕ ಕೊಡಗಿನ ಶ್ರೀಮಂತ ಸಂಸ್ಕೃತಿಯ ಪ್ರತೀಕವಾಗಿದೆ.

ಪರಾಮರ್ಶನಗ್ರಂಥಗಳು :

1) ಡಾ. ಸರಸ್ವತಿ ಪ್ರಕಾಶ್ ಕೋರನ 2010 ಕೊಡಗು ಗೌಡ ಸಮುದಾಯ "ಕನ್ಯಾಪುಣ್ಯ" ಮೂರ್ನಾಡು

2) ಡಾ.ಪುರುಷೋತ್ತಮ ಬಿಳಿಮಲೆ 2015 ವಲಸೆ ಸಂಘರ್ಷ ಮತ್ತು ಸಮನ್ವಯಆಕೃತಿಆಶಯ ಪಬ್ಲಿಷರ್ ಮಂಗಳೂರು